**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ನೂತನವಾಗಿ ಸ್ಥಾಪಿತವಾಗಿರುವ ಬೀದರ್ ವಿಶ್ವವಿದ್ಯಾಲಯದ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಕೇಂದ್ರಗಳು, ಬೋಧಕ-ಬೋಧಕೇತರ ಹುದ್ದೆಗಳು, ಸಂಯೋಜಿತ ಕಾಲೇಜುಗಳು ಮತ್ತು ಚರಾಸ್ತಿ-ಸ್ಥಿರಾಸ್ತಿಗಳನ್ನು ಸ್ಥಳಾಂತರಿಸಿ ಹಂಚಿಕೆ ಮಾಡುವ ಬಗ್ಗೆ-ಆದೇಶ.

ಓದಲಾಗಿದೆ:-

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2022ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 19 ಶಾಸನ 2022, ದಿನಾಂಕ:10.10.2022.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ದಿನಾಂಕ: 05.11.2022.
3. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ದಿನಾಂಕ: 08.11.2022.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ದಿನಾಂಕ: 30.11.2022.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ದಿನಾಂಕ: 13.12.2022.
6. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಇವರ ಪತ್ರ ಸಂಖ್ಯೆ: ಕರಾಉಶಿಪ/ವಿಸಿಪಿ/ಹೊಸವಿವಿ/3/2023, ದಿನಾಂಕ: 13.03.2023.

********

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಸಂಖ್ಯೆ(1)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2022ರನ್ವಯ ಬೀದರ್‌ನಲ್ಲಿ ಕೇಂದ್ರ ಕಾರ್ಯ ಸ್ಥಾನವನ್ನು ಹೊಂದಿರುವ ಮತ್ತು ಬೀದರ್ ಜಿಲ್ಲೆಯ ಮೇಲೆ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಂಯೋಜನೆಗೊಳಿಸುವ ವಿಶ್ವವಿದ್ಯಾಲಯವಾಗಿ ಬೀದರ್ ವಿಶ್ವವಿದ್ಯಾಲಯವನ್ನು ನೂತನವಾಗಿ ಸ್ಥಾಪಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ(2) ರಿಂದ (4)ರ ವರೆಗಿನ ರ ಸರ್ಕಾರದ ಆದೇಶಗಳಲ್ಲಿ 2022-23ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾದಂತೆ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ತಂತ್ರಜ್ಞಾನದ ಗರಿಷ್ಠ ಬಳಕೆಯೊಂದಿಗೆ ಹೆಚ್ಚುವರಿ ಮಾನವ ಸಂಪನ್ಮೂಲ ಉಪಯೋಗಿಸದೇ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಚಾಮರಾಜನಗರ, ಹಾಸನ, ಬೀದರ್, ಹಾವೇರಿ, ಕೊಡಗು, ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸ್ಥಾಪನೆಗೊಂಡಿರುವ ವಿನೂತನ ಮಾದರಿಯ 07 ವಿಶ್ವವಿದ್ಯಾಲಯಗಳಿಗೆ ಸಂಬಂಧಿಸಿದಂತೆ ಮತ್ತು ಪ್ರಸ್ತುತ ಏಕಾತ್ಮಕ ಸ್ವರೂಪದ ವಿಶ್ವವಿದ್ಯಾಲಯವಾಗಿರುವ ಮಂಡ್ಯ ವಿಶ್ವವಿದ್ಯಾಲಯವನ್ನು ಸಂಯೋಜಿತ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸುವ ಸಂಬಂಧ ಆರ್ಥಿಕ, ಭೌತಿಕ ಮತ್ತು ಮಾನವ ಸಂಪನ್ಮೂಲಗಳ ಕುರಿತಂತೆ ಷರತ್ತುಗಳನ್ನು ವಿಧಿಸಿ ಈ ಕೆಳಕಂಡಂತೆ ಕೇಂದ್ರ ಸ್ಥಾನವನ್ನು ನಿಗದಿಪಡಿಸಿ ಆದೇಶಿಸಲಾಗಿತ್ತು.

| ಕ್ರ. ಸಂ. | ಮೂಲ ವಿಶ್ವವಿದ್ಯಾಲಯದ ಹೆಸರು | ಹೊಸದಾಗಿ ಪ್ರಾರಂಭಿಸಲಾದ ವಿಶ್ವವಿದ್ಯಾಲಯಗಳ ಹೆಸರು | ನೂತನ ವಿಶ್ವವಿದ್ಯಾಲಯದ ಕೇಂದ್ರಸ್ಥಳ |
|---|---|---|---|
| 01 | ಮೈಸೂರು ವಿಶ್ವವಿದ್ಯಾಲಯ | ಚಾಮರಾಜನಗರ | ಡಾ: ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ |



ಸಾರ್ವಜನಿಕ ಮಾಹಿತಿ ಅಧಿಕಾ
ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾ
ರಾಯಚೂರು

| | | | |
|---|---|---|---|
| | | ಹಾಸನ | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ |
| | | ಮಂಡ್ಯ | ಸರ್.ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ |
| 02 | ಗುಲ್ಬರ್ಗಾ ವಿಶ್ವವಿದ್ಯಾಲಯ | ಬೀದರ್ | ಜ್ಞಾನಕಾರಂಜಿ, ಹಾಲಹಳ್ಳಿ, ಭಾಲ್ಕಿ, ತಾ: ಬೀದರ್ ಜಿಲ್ಲೆ |
| 03 | ಮಂಗಳೂರು ವಿಶ್ವವಿದ್ಯಾಲಯ | ಕೊಡಗು | ಚಿಕ್ಕಅಳುವಾರ, ಕುಶಾಲನಗರ |
| 04 | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ | ಕೊಪ್ಪಳ | 4ನೇ ಮಹಡಿ, ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್, ಕೊಪ್ಪಳ |
| 05 | ರಾಣಿಚನ್ನಮ್ಮ ವಿಶ್ವವಿದ್ಯಾಲಯ | ಬಾಗಲಕೋಟೆ | ಜಮಖಂಡಿ, ಬಾಗಲಕೋಟೆ ಜಿಲ್ಲೆ |
| 06 | ಕರ್ನಾಟಕ ವಿಶ್ವವಿದ್ಯಾಲಯ | ಹಾವೇರಿ | ಕೆರಿಮತ್ತಿಹಳ್ಳಿ, ಹಾವೇರಿ |

ಮೇಲೆ ಓದಲಾದ ಕ್ರಮಸಂಖ್ಯೆ(5)ರ ಸರ್ಕಾರದ ಆದೇಶದಲ್ಲಿ ನೂತನವಾಗಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯಗಳು ಸುಗಮವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ, ಆಯಾ ಮೂಲ ವಿಶ್ವವಿದ್ಯಾಲಯಗಳಿಂದ ಬೇರ್ಪಟ್ಟ ನೂತನ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ, ಮೂಲ ವಿಶ್ವವಿದ್ಯಾಲಯಗಳಿಂದ ಹೊಸ ವಿಶ್ವವಿದ್ಯಾಲಯಗಳಿಗೆ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಸ್ಥಳಾಂತರಿಸಬೇಕಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳು, ಸಂಯೋಜಿತ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಚರಾಸ್ತಿ-ಸ್ಥಿರಾಸ್ತಿಗಳ ಹಂಚಿಕೆಯ ಬಗ್ಗೆ ಪರಿಶೀಲಿಸಿ ವರದಿ ನೀಡಲು ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ (6)ರ ಪತ್ರದಲ್ಲಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ದಿನಾಂಕ: 14.12.2022, 21.12.2022 ಮತ್ತು 04.01.2023ರಂದು ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷರ ಕಛೇರಿಯಲ್ಲಿ ಸಭೆಗಳನ್ನು ಆಯೋಜಿಸಿ ಗುಲ್ಬರ್ಗಾ ವಿಶ್ವವಿದ್ಯಾಲಯ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ರಾಣಿಚನ್ನಮ್ಮ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಇವರುಗಳನ್ನೊಳಗೊಂಡಂತೆ ಚರ್ಚಿಸಿ ಮೂಲ ವಿಶ್ವವಿದ್ಯಾಲಯಗಳು ಒದಗಿಸಿರುವ ಮಾಹಿತಿಯ ಆಧಾರದ ಮೇಲೆ ಕೂಲಂಕಷವಾಗಿ ಪರಿಶೀಲಿಸಿ, ನೂತನವಾಗಿ ಸ್ಥಾಪಿತವಾಗಿರುವ ಬೀದರ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಸಂಬಂಧಿಸಿದ ಸ್ನಾತಕೋತ್ತರ ಕೇಂದ್ರಗಳು ಹಾಗೂ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಬೋಧಕ-ಬೋಧಕೇತರ ಹುದ್ದೆಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ನಿರ್ದಿಷ್ಟ ಅಂಕಿ-ಅಂಶಗಳನ್ವಯ ಬೋಧಕ- ಬೋಧಕೇತರ ಹುದ್ದೆಗಳನ್ನು ಮತ್ತು ಸಂಯೋಜಿತ ಕಾಲೇಜುಗಳು ಹಾಗೂ ಚರಾಸ್ತಿ-ಸ್ಥಿರಾಸ್ತಿಗಳನ್ನು ಹಂಚಿಕೆ ಮಾಡುವ ಬಗ್ಗೆ ಸಮಿತಿ ಮತ್ತು ಸಂಬಂಧಪಟ್ಟ ಮೂಲ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಕುಲಸಚಿವರುಗಳ ಸಹಮತಿ ಪಡೆದು ಸೂಕ್ತ ಶಿಫಾರಸ್ಸಿನೊಂದಿಗೆ ಸಮಗ್ರವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ನೂತನವಾಗಿ ಸ್ಥಾಪಿಸಲ್ಪಟ್ಟ ಬೀದರ್ ಮತ್ತು ರಾಯಚೂರು ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಅವುಗಳಲ್ಲಿ ಇರಬೇಕಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಶೇಕಡವಾರು ಹಂಚಿಕೆಯನ್ನು ಈ ಕೆಳಕಂಡಂತೆ ಮಾಡಲಾಗಿರುತ್ತದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ
ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

| | | | | | |
|---|---|---|---|---|---|
| I. | ಮಹಾವಿದ್ಯಾಲಯಗಳ ಸಂಖ್ಯೆಗಳಿಗನುಗುಣವಾಗಿ ಪರಿಗಣಿಸಿದ ಅನುಪಾತ: | | | | |
| | 1 | ಗುಲಬರ್ಗಾ ವಿಶ್ವವಿದ್ಯಾಲಯದ (ಕಲಬುರಗಿ ಜಿಲ್ಲೆಯ ವ್ಯಾಪ್ತಿ) ಮಹಾವಿದ್ಯಾಲಯಗಳ ಸಂಖ್ಯೆ | | | 191 |
| | 2 | ಬೀದರ ವಿಶ್ವವಿದ್ಯಾಲಯ ಅಡಿಯಲ್ಲಿ (ಬೀದರ ಜಿಲ್ಲೆಯ ವ್ಯಾಪ್ತಿ) ಮಹಾವಿದ್ಯಾಲಯಗಳ ಸಂಖ್ಯೆ | | | 130 |
| | 3. | ಈಗಾಗಲೇ ಸ್ಥಾಪಿತಗೊಂಡಿರುವ ರಾಯಚೂರು ವಿಶ್ವವಿದ್ಯಾಲಯ (ರಾಯಚೂರು, ಯಾದಗಿರಿ ಜಿಲ್ಲೆಗಳ ವ್ಯಾಪ್ತಿ) ಮಹಾವಿದ್ಯಾಲಯಗಳ ಸಂಖ್ಯೆ | | | 196 |
| | | | | ಒಟ್ಟು | 517 |
| | | ಗುಲಬರ್ಗಾ ವಿಶ್ವವಿದ್ಯಾಲಯ | ರಾಯಚೂರು ವಿಶ್ವವಿದ್ಯಾಲಯ | ಬೀದರ ವಿಶ್ವವಿದ್ಯಾಲಯ | |
| | | 36.94% (160) | 37.94% (164) | 25.14% (108) | 432 |

ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ನೂತನವಾಗಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯಗಳು ಸುಗಮವಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ, ಮಾತೃ ವಿಶ್ವವಿದ್ಯಾಲಯಗಳಿಂದ ಹೊಸ ವಿಶ್ವವಿದ್ಯಾಲಯಗಳಿಗೆ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಸ್ಥಳಾಂತರಿಸಬೇಕಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳು, ಸಂಯೋಜಿತ ಕಾಲೇಜುಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಚರಾಸ್ತಿ-ಸ್ಥಿರಾಸ್ತಿಗಳ ಹಂಚಿಕೆಯ ಬಗ್ಗೆ ಸಲ್ಲಿಸಿರುವ ವರದಿಯನ್ನು ಸರ್ಕಾರವು ಒಪ್ಪಿ, ಬೀದರ್ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಸ್ಥಳಾಂತರಿಸಬೇಕಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು ಚರಾಸ್ತಿ-ಸ್ಥಿರಾಸ್ತಿಗಳ ಹಂಚಿಕೆ ಕುರಿತಂತೆ ಸಮಿತಿಯ ಶಿಫಾರಸ್ಸಿನಂತೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 81 ಯುಎನ್ಇ(1) 2022, ಬೆಂಗಳೂರು, ದಿನಾಂಕ: 18.08.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ವಿಭಜನೆಗೊಂಡು ನೂತನವಾಗಿ ಸಂಯೋಜನಾ ವಿಶ್ವವಿದ್ಯಾಲಯವಾಗಿ ಸ್ಥಾಪಿತವಾಗಿರುವ ಬೀದರ್ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಬೋಧಕ-ಬೋಧಕೇತರ ಹುದ್ದೆಗಳು, ಸ್ನಾತಕೋತ್ತರ ಕೇಂದ್ರಗಳು, ಸಂಯೋಜಿತ ಕಾಲೇಜುಗಳು ಮತ್ತು ಚರಾಸ್ತಿ-ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯವಾರು ಅನುಬಂಧಗಳಲ್ಲಿರುವಂತೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸ್ಥಳಾಂತರಿಸಿ ಹಂಚಿಕೆ ಮಾಡಿ ಆದೇಶಿಸಿದೆ.

ಷರತ್ತುಗಳು:

1. ನೂತನ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಿ ಕುಲಪತಿಗಳು, ಕುಲಸಚಿವರು ಹಾಗೂ ಇನ್ನಿತರ ಶಾಸನಬದ್ಧ ಅಧಿಕಾರಿಗಳು ನೇಮಕವಾಗಿರುವುದರಿಂದ ಯು.ಜಿ.ಸಿ. ಅಧಿನಿಯಮದ ಸೆಕ್ಷನ್ 2(ಎಫ್) ಅಡಿ ಪದವಿಗಳನ್ನು ಪ್ರಧಾನ ಮಾಡಲು ಮಾನ್ಯತೆ ಪಡೆಯತಕ್ಕದ್ದು.
2. ಯು.ಜಿ.ಸಿ. ಮತ್ತು ಇತರ ಕೇಂದ್ರ ಸರ್ಕಾರದ ಪ್ರಾಧಿಕಾರಗಳಿಂದ ವಿಶ್ವವಿದ್ಯಾಲಯಗಳು ಅಥವಾ ಅವುಗಳಿಗೆ ಸಂಯೋಜನೆಗೊಂಡ ಕಾಲೇಜುಗಳು ಅನುದಾನ ಪಡೆಯಲು ಯು.ಜಿ.ಸಿ. ಅಧಿನಿಯಮದ ಸೆಕ್ಷನ್ 12ಬಿ ಅಡಿ ಮಾನ್ಯತೆ ಪಡೆಯತಕ್ಕದ್ದು.
3. ನೂತನ ವಿಶ್ವವಿದ್ಯಾಲಯಗಳು NAAC Accreditation ಅನ್ನು ಯುಜಿಸಿ ನಿಯಮಗಳನ್ವಯ 05 ವರ್ಷಗಳೊಳಗೆ ಪಡೆಯಲು ಕ್ರಮವಹಿಸತಕ್ಕದ್ದು.

ಸಾರ್ವಜನಿಕ ಮಾಹಿತಿ ಅಧಿಕಾರಿ
ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

4 ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರಡಿ ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕಾಲೇಜುಗಳು ಕೂಡಲೇ ಜಾರಿಗೆ ಬರುವಂತೆ ಸಂಬಂದಪಟ್ಟ ಬೀದರ್ ವಿಶ್ವವಿದ್ಯಾಲಯದ ಸಂಯೋಜನಾ ಪ್ರಕ್ರಿಯೆಗೆ ಒಳಪಡುತ್ತವೆ. ಈ ಬಗ್ಗೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯವು ಕೂಡಲೇ ಅಗತ್ಯ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಂದಕುಮಾರ್ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್.ಎಸ್.ಎ)/(ಇ&ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ ಅಂಚೆ ಪೆಟ್ಟಿಗೆ ಸಂಖ್ಯೆ:5398 ಹಾಗೂ ಪ್ರಧಾನ ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5359 , ಬೆಂಗಳೂರು-560001 (3 ಪ್ರತಿಗಳು).
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕುಲಪತಿಗಳು/ ಕುಲಸಚಿವರು/ಹಣಕಾಸು ಅಧಿಕಾರಿಗಳು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
4. ಕುಲಪತಿಗಳು/ ಕುಲಸಚಿವರು/ಹಣಕಾಸು ಅಧಿಕಾರಿಗಳು, ಬೀದರ್ ವಿಶ್ವವಿದ್ಯಾಲಯ, ಬೀದರ್.
5. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ನಂ. 30, ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಆವರಣ, ಪ್ಯಾ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಂಗಳೂರು.
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
8. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
9. ಇ- ಸಮನ್ವಯಾಧಿಕಾರಿ, ಉನ್ನತ ಶಿಕ್ಷಣ ಇಲಾಖೆ (ಜಾಲತಾಣದಲ್ಲಿ ಪ್ರಚುರಪಡಿಸುವುದು).
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-ಇ, ವಿಧಾನಸೌಧ.
11. ಆಂತರಿಕಆರ್ಥಿಕಸಲಹೆಗಾರರು, ಶಿಕ್ಷಣಇಲಾಖೆ, ಬಹುಮಹಡಿಗಳಕಟ್ಟಡ, ಬೆಂಗಳೂರು.
12. ರಕ್ಷಣಾಕಡತ/ಹೆಚ್ಚುವರಿಪ್ರತಿ.

ಸಾರ್ವಜನಿಕ ಮಾಹಿತಿ ಅಧಿಕಾರಿ
ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಸರ್ಕಾರದ ಆದೇಶ ಸಂಖ್ಯೆ: ಇಡಿ 88 ಯುಎನ್‌ಇ(1) 2022ಕ್ಕೆ ಸಂಬಂಧಿಸಿದಂತೆ **ಅನುಬಂಧ-1**

**ಬೀದರ್ ವಿಶ್ವವಿದ್ಯಾಲಯ (ಮೂಲ ವಿಶ್ವವಿದ್ಯಾಲಯ: ಗುಲ್ಬರ್ಗಾ ವಿಶ್ವವಿದ್ಯಾಲಯ)**

1. ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವನ್ನು ಬೀದರ್ ವಿಶ್ವವಿದ್ಯಾಲಯಕ್ಕೆ ಯಥಾವತ್ತಾಗಿ ಹಸ್ತಾಂತರಿಸಿದೆ. (ಒಟ್ಟು ಮಂಜೂರಾದ ಭೂ ಪ್ರದೇಶ 322 ಎಕರೆ 18 ಗುಂಟೆ ಮತ್ತು ಕಟ್ಟಡಗಳಿಗಾಗಿ ಬಳಸಲಾದ ಪ್ರದೇಶ -11305.54 Sq. Mtr ಸೇರಿದಂತೆ)
2. ನೂತನವಾಗಿ ಪ್ರಾರಂಭಿಸಲ್ಪಟ್ಟ ಬೀದರ್ ವಿಶ್ವವಿದ್ಯಾಲಯ ಹಾಗೂ ರಾಯಚೂರು ವಿಶ್ವವಿದ್ಯಾಲಯಕ್ಕೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪ್ರಾದೇಶಿಕ ಅಧಿಕಾರವ್ಯಾಪ್ತಿ ಮತ್ತು ಕಾರ್ಯಭಾರದ ಆಧಾರದ ಮೇಲೆ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ಸೇರಿದ ಈ ಕೆಳಕಂಡ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸ್ಥಳಾಂತರಿಸಿ ಹಂಚಿಕೆ ಮಾಡಲಾಗಿದೆ;

**i. ಬೀದರ್ ವಿಶ್ವವಿದ್ಯಾಲಯ, ಬೀದರ್-ಬೋಧಕ ಹುದ್ದೆಗಳು**

**Teaching Posts to be transferred from Gulbarga University to Bidar University**

| Sl. No. | Department | Sanctioned Posts in GUG | | | Vacant Posts in GUG | | | Posts Recommended for Transfer | | | |
|---|---|---|---|---|---|---|---|---|---|---|---|
| | | Prof. | Assoc. Prof. | Asst. Prof. | Prof. | Assoc. Prof. | Asst. Prof. | Prof. | Assoc. Prof. | Asst. Prof. | Total |
| 1 | Sugar Technology | 01 | 01 | 01 | 0 | 0 | 1 | 01 | 01 | 01 | 03 |
| 1 | Biochemistry | 01 | 02 | 05 | 01 | 02 | 01 | | | 01 | 01 |
| 2 | Botany | 01 | 02 | 06 | 01 | 01 | 05 | | | 02 | 02 |
| 3 | Chemistry | 02 | 09 | 13 | 02 | 09 | 11 | | 03 | 01 | 04 |
| 4 | Commerce | 01 | 02 | 09 | 00 | 02 | 05 | | | 02 | 02 |
| 5 | English | 02 | 03 | 05 | 01 | 03 | 04 | 01 | 01 | 01 | 03 |
| 6 | History | 01 | 02 | 05 | 01 | 02 | 05 | | | 01 | 01 |
| 7 | Kannada | 02 | 05 | 11 | 02 | 05 | 10 | | 01 | 01 | 02 |
| 8 | Marathi | 00 | 01 | 02 | 00 | 01 | 02 | | | 01 | 01 |
| 9 | Mathematics | 03 | 06 | 08 | 03 | 05 | 04 | 01 | 01 | | 02 |
| 10 | Physics | 01 | 04 | 10 | 01 | 04 | 05 | | 01 | 02 | 03 |
| 11 | Political Science | 02 | 02 | 04 | 02 | 01 | 03 | 01 | | | 01 |
| 12 | Statistics | 01 | 01 | 04 | 01 | 01 | 03 | | | 02 | 02 |
| 13 | Zoology | 01 | 02 | 06 | 01 | 01 | 06 | | | 02 | 02 |
| | **Total** | **18** | **41** | **88** | | | | **04** | **08** | **17** | **29** |

**ii. ಬೀದರ್ ಮತ್ತು ರಾಯಚೂರು ವಿಶ್ವವಿದ್ಯಾಲಯ –ಬೋಧಕೇತರ ಹುದ್ದೆಗಳು**

Non-Teaching Posts to be shifted from Gulbarga University to Raichur & Bidar Universities.

| Sl. No. | Cadre | Pay Scale | Posts Sanctioned | Posts Vacant | Posts to GUG | Posts to Raichur U | Posts to Bidar U |
|---|---|---|---|---|---|---|---|
| 1 | Deputy Librarian | 131400-217400 (UGC) | 04 | 03 | 02 | 01 | 01 |
| 2 | Asst. Librarian | 57700-182400 (UGC) | 13 | 09 | 06 | 04 | 03 |
| 3 | Asst.Dir., Phy.Edn.Sports | 57700-182400 (UGC) | 07 | 03 | 05 | 01 | 01 |
| | | **State Scale Group-A** | | | | | |
| 4 | Deputy Registrar | 67550-104600 | 06 | 06 | 04 | 01 | 01 |
| 5 | Assistant Registrar | 52650-97100 | 06 | 06 | 04 | 01 | 01 |

| | | | | | | | |
|---|---|---|---|---|---|---|---|
| 6 | Asst. Exe. Engineer | 52650-97100 | 03 | 01 | 02 | 01 | 0 |
| | State Scale Group-B | | | | | | |
| 7 | Office Supertd. | 43100-83900 | 18 | 18 | 10 | 05 | 03 |
| 8 | Asst. Engr.(Civil &El.) | 43100-83900 | 03 | 03 | 02 | 0 | 01 |
| | State Scale Group-C | | | | | | |
| 9 | Asst. Office Supdt. | 37900-70850 | 12 | 02 | 08 | 02 | 02 |
| 10 | Junior Engineer, | 33450-62600 | 03 | 03 | 01 | 01 | 01 |
| 11 | Technical Assistant | 33450-62600 | 04 | 02 | 02 | 01 | 01 |
| 12 | Research Assistant | 33450-62600 | 15 | 15 | 08 | 05 | 02 |
| 13 | Field Asst/Collector | 33450-62600 | 08 | 05 | 05 | 02 | 01 |
| 14 | Stenographer, | 30350-58250 | 14 | 13 | 07 | 04 | 03 |
| 15 | First Division Asst.t | 30350-58250 | 50 | 20 | 25 | 15 | 10 |
| 16 | Store Keeper, | 30350-58250 | 06 | 02 | 04 | 01 | 01 |
| 17 | Lab Assistant, | 27650-52650 | 15 | 15 | 08 | 04 | 03 |
| 18 | Library Assistant | 27650-52650 | 06 | 05 | 04 | 01 | 01 |
| 19 | Second Divsn.Asst. | 21400-42000 | 121 | 94 | 66 | 35 | 20 |
| 20 | Typist/DEO, | 21400-42000 | 25 | 25 | 15 | 06 | 04 |
| 21 | Driver | 21400-42000 | 09 | 08 | 06 | 02 | 01 |
| 22 | Electrical Wireman, | 21400-42000 | 04 | 03 | 02 | 01 | 01 |
| 23 | Sports Assistant | 21400-42000 | 04 | 03 | 02 | 01 | 01 |
| 24 | Cook | 21400-42000 | 03 | 02 | 02 | 01 | 00 |
| | State Scale Group-D | | | | | | |
| 24 | Maistry/ Mukadam | 18600-32600 | 11 | 09 | 05 | 04 | 02 |
| 25 | Attender/LabAttender | 18600-32600 | 36 | 26 | 20 | 10 | 06 |
| 26 | Plumber Attender | 18600-32600 | 06 | 06 | 04 | 01 | 01 |
| 27 | Marker/Ground Man | 17000-28950 | 04 | 04 | 02 | 01 | 01 |
| 28 | Peon/ Watchman | 17000-28950 | 129 | 93 | 70 | 35 | 24 |
| 29 | Garden worker/ Mali | 17000-28950 | 75 | 50 | 50 | 15 | 10 |
| 30 | Scavenger | 17000-28950 | 06 | 05 | 04 | 01 | 01 |
| 31 | Guards | 17000-28950 | 09 | 09 | 06 | 02 | 01 |
| | **Total** | | | | | **164** | **108** |

165

Research Asst. & Field Asst./Field Collector may be converted into Teaching/Research Asst.

3. ಬೀದರ್ ವಿಶ್ವವಿದ್ಯಾಲಯಕ್ಕೆ ಮೂಲ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಈ ಕೆಳಗಿನಂತೆ ಸ್ಥಿರಾಸ್ತಿ (Immovable) ಮತ್ತು ಚರಾಸ್ತಿ (Movable) ಗಳನ್ನು ಯಥಾವತ್ತಾಗಿ ಹಸ್ತಾಂತರಿಸಲಾಗಿದೆ.

(i) ಸ್ಥಿರಾಸ್ತಿ (Immovable)

ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿದ್ದ ಬೀದರ ಕೇಂದ್ರದ ಸ್ಥಿರಾಸ್ತಿ ವಿವರ ಕೆಳಗಿನಂತಿವೆ.

i) ಒಟ್ಟು ಮಂಜೂರಾದ ಭೂಪ್ರದೇಶ – 322 ಎಕರೆ 18 ಗುಂಟೆ

ii) ಕಟ್ಟಡಗಳಿಗಾಗಿ ಬಳಸಿಕೊಳ್ಳಲಾದ ಪ್ರದೇಶ – 11305.54 Sqm

ಸಾರ್ವಜನಿಕ ಮಾಹಿತಿ ಅಧಿಕಾರಿ, ಆರ್.ಟಿ.ಐ. ಕೋಶ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

| Sl.No | Name of the Infrastructure | | Details |
|---|---|---|---|
| 1. | Construction of Administrative Building at 1st floor P.G. Centre, Halhalli (K) | | |
| | a) | GF | 4521.12 Sqm. |
| | b) | FF | 4521.22 Sqm. |